# ಅಮ್ಮಾ ಅಮ್ಮಾ ಹಸಿವಾಗ್ತಿದೆ

ತಡವಾಗಿ ಯಾಕೆ ಎಬ್ಬಿಸಿದ್ದು
ಸ್ನಾನಕ್ಕೆ ಬಿಸಿನೀರು ಇಡೆ
ಅಯ್ಯೋ ಸುಡ್ತಾ ಇದೆಯಲ್ಲ
ಸ್ವಲ್ಪ ತಣ್ಣೀರು ಬೆರೆಸಿಬಿಡೆ

ಹಲ್ಲುಜ್ಜ ಬೇಕು ಪೇಸ್ಟೆಲ್ಲಿದೆ
ಬ್ರಷ್ ತಂದುಕೊಡೆ
ತಲೆಗೆ ಎಣ್ಣೆ ಹಚ್ಚಲೇ ಇಲ್ಲ
ಮಿಸ್ ಬೊಯ್ತಾರ್ನೋಡೆ

ಅಮ್ಮಾ ಅಮ್ಮಾ ಹಸಿವಾಗ್ತಿದೆ
ತಿನ್ನೋಕೇನಾದ್ರು ಕೊಡೆ
ಸ್ಕೂಲಿಗೆ ಮತ್ತೆ ಲೇಟಾಗ್ತಿದೆ
ಹಾಕೇ ಬೇಗನೇ ಜಡೆ

ಶೂಗಳನಂತು ಹೊರಸಿಲ್ಲವಲ್ಲ
ಸಾಕ್ಸ್ ಎಲ್ಲಿವೆ ನೋಡೆ
ಸಮವಸ್ತ್ರವು ಇಸ್ತ್ರಿ ಆಗಿಲ್ಲವಲ್ಲ
ಇಸ್ತ್ರಿಪೆಟ್ಟಿಗೆ ಆನ್ ಮಾಡೆ

ತುತ್ತು ತುರುಕಿ ಮುಗ್ಸಂತೀಯ
ನೀನು ತಿಂದು ನೋಡೆ
ಮುತ್ತು ಕೊಟ್ಟು ಟಾಟಾ ಹೇಳ್ಬೇಕು
ನಿನ್ನ ಮುಖ ಈಕಡೆ ಕೊಡೆ

ನನ್ನ ಮುದ್ದಿನ ಅಮ್ಮ ನೀನು
ಬೇಗನೆ ಟಾಟಾ ಮಾಡೆ
ಕಣ್ಣನು ಮಿಟುಕಿಸಿ ನಗೆಸೂಸು
ಹೊರಡುವೆ ಶಾಲೆ ಕಡೆ

■ **ಬಾಗೂರು ಮಾರ್ಕಂಡೇಯ**





ಒಂದಾನೊಂದು ಕಾಲದಲ್ಲಿ ಸರಸ್ವತಿಪುರವೆಂಬ ಪಟ್ಟಣವನ್ನು ಭೀಕರ ಬರಗಾಲ ಆವರಿಸಿಕೊಂಡಿತ್ತು. ಎಲ್ಲಿ ನೋಡಿದರಲ್ಲಿ ಬರದ ಬೇಗೆ ಜನ–ಜಾನುವಾರುಗಳೆನ್ನದೆ ಎಲ್ಲವನ್ನೂ ಸುಟ್ಟು ಭಸ್ಮ ಮಾಡುತ್ತಿತ್ತು. ನೀರು–ನಿಡಿ, ಮಳೆ–ಬೆಳೆ ಇಲ್ಲದೆ ಜನರೆಲ್ಲಾ ಸಂಕಷ್ಟಕ್ಕೆ ಸಿಲುಕಿದ್ದರು. ಶ್ರೀಮಂತರಿಗೇನೂ ಅಷ್ಟಾಗಿ ತೊಂದರೆ ಇರಲಿಲ್ಲ. ಕೂಡಿಟ್ಟಿದ್ದ ದವಸ–ಧಾನ್ಯ, ಧನ–ಕನಕಗಳಿಂದ ಹೇಗೋ ಬರದಿಂದ ಪಾರಾಗಿದ್ದರು. ಆದರೆ ಅಲ್ಲೇ ದುಡಿದು ಅಲ್ಲೇ ಉಣ್ಣುವ ಬಡವರ ಮತ್ತು ಮಧ್ಯಮ ವರ್ಗದ ಜನರ ಪರಿಸ್ಥಿತಿ ಮಾತ್ರ ಶೋಚನೀಯವಾಗಿತ್ತು.